ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ಸೇತುವೆ ಆಗಬೇಕೆಂದು ಲೋಕ ಸಭೆಯ ಸದಸ್ಯರಾಗಿರುವ ಮಾನ್ಯ ಕೆ. ಲಕ್ಕಪ್ಪನವರು, ಇದೇ ಸಭೆಯಲ್ಲಿ ಸದಸ್ಯರಾಗಿದ್ದಾಗ ಸರ್ಕಾರಕ್ಕೂ, ಚೀಫ್ ಇಂಜಿನಿಯರಿಗೂ, ಸೂಪರಿಂಟೆಂಡಿಂಗ್ ಇಂಜಿನಿಯರಿಗೂ ಮನವಿಗಳನ್ನು ಏನೂ ಕೊಟ್ಟಿರ್ಲಿಲ್ಲವೇ, ಸ್ವಾಮಿ ?

ಶ್ರೀ ಕೆ. ಲಕ್ಕಪ್ಪ.—ಅವರಿಂದ ಈವಾಗ ಮನವಿ ಬಂದಿರಬಹುದು. ಹಿಂದೆ ಯಾವತ್ತಿಗೂ ಬಂದಿಲ್ಲ.

Pension and Provident Fund Schemes

213. Sri M. NAGAPPA (Raichur).—

Will the Chief Minister be pleased to state : —

(*a*) whether the provident fund rules or pension rules were applicable to ex-Hyderabad State employees working in Electricity Department before the reorganisation of the States ;

(*b*) after the formation of the new Mysore State whether Government asked the employees (Ex-Hyderabad area) for option to adopt the pension rules or to continue to be under the Provident Fund Rules ;

(*c*) whether the employees of erstwhile Hyderabad State (Department of Electricity) have opted for pension rules ;

(*d*) if so, whether Government has accepted their option ;

(*e*) whether Government has refunded the provident fund share of the employees ;

(*f*) if not, the reasons therefor ?

A.—Sri VEERENDRA PATIL (Chief Minister).—

(*a*) Some employees were covered by the pension scheme and others by provident fund scheme.

(*b*) The employees coming under the provident fund scheme were given the option to come under the pension scheme of M.C.S.R.

(*c*) Yes.

(*d*) Yes.

(*e*) No.

(*f*) According to Electricity Department Provident Fund Rules final withdrawal is not permissible while the employees are still in service. Hence the amounts were not refunded and were credited to the G.P.F.

ಶ್ರೀ ಎಂ. ನಾಗಪ್ಪ.—ಹೈದರಾಬಾದು ಕರ್ನಾಟಕದಲ್ಲಿರುವ ಎರೆಕ್ಟ್ರಿಸಿಟಿ ಬೋರ್ಡ್ ಕೆಲಸ ಗಾರರಿಗೆ ಎಂ.ಸಿ.ಎಸ್.ಆರ್. ಪ್ರಕಾರ ಪ್ರಾವಿಡೆಂಟ್ ಫಂಡ್ ಬಿಟ್ಟು ಪೆನ್‌ಷನ್ ಸ್ಕೀಮಿಗೆ ಆಪ್ಷ್ ಮಾಡಿಕೊಳ್ಳುವುದಕ್ಕೆ ಅವಕಾತಕೊಡಲಾಗಿದೆ ಎಂದು ಹೇಳಿದ್ದೀರಿ, ಎಷ್ಟು ಜನ ಆಪ್ಷ್ ಮಾಡಿಕೊಂಡಿದ್ದಾರೆ, ಎಷ್ಟು ಜನ ಆಪ್ಷ್ ಮಾಡಿಕೊಳ್ಳುವವರಿದ್ದಾರೆ ಎನ್ನುವ ವಿವರಗಳನ್ನು ಕೊಡಬಹುದೋ ?

† ಶ್ರೀ ವೀರೇಂದ್ರ ಪಾಟೀಲ್.—ಎಲ್ಲರೂ ಆಪ್ಟ್ ಮಾಡಿಕೊಂಡಿದ್ದಾರೆ. ಪ್ರಾವಿಡೆಂಟ್ ಫಂಡ್ ಸ್ಕೀಮಿನಲ್ಲಿ ಬರುವವರೆಲ್ಲ ಡಿಸ್ಕ್ರಿಪ್ಟ್ ಪವರ್ ಸ್ಕೀಮಿನಲ್ಲಿ ಕೆಲಸ ಮಾಡುತ್ತಿದ್ದವರು. ಅವರು ಪ್ರಾವಿಡೆಂಟ್ ಫಂಡ್ ಸ್ಕೀಮಿನ ಕೆಳಗೆ ಬರುತ್ತಿದ್ದರು. ಅವರೆಲ್ಲ ಆಪ್ಟ್ ಮಾಡಿಕೊಂಡಿದ್ದಾರೆ.

ಶ್ರೀ ಎಂ. ನಾಗಪ್ಪ.—ಆಪ್ಟ್ ಮಾಡಿಕೊಂಡ ನಂತರ ಪ್ರಾವಿಡೆಂಟ್ ಫಂಡನ್ನು ವಾಸ್ತವಿಕವಾಗಿ ಹಿಡಿದುಕೊಳ್ಳತಕ್ಕದು ಸರಿಯಾದುದಲ್ಲ. ಏನಾದರೂ ರೂಲ್ಸ್ ತಿದ್ದುಪಡಿ ಮಾಡಿ ಅದನ್ನು ವಾಪಸ್ಸು ಕೊಡಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾವು ಹಿಡಿದುಕೊಂಡಿಲ್ಲ. ಎಂಪ್ಲಾಯೀಸ್ ಕಾಂಟ್ರಿಬ್ಯೂಷನ್ ಮತ್ತು ಅದರ ಮೇಲಿನ ಬಡ್ಡಿಯನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ. ಹಾಗೆ ಜಿ.ಪಿ. ಎಫ್. ಸ್ಕೀಮಿಗೆ ಟ್ರಾನ್ಸ್‌ಫರ್ ಮಾಡಿ ಹೊಸ ಅಕೌಂಟ್ಸ್ ತೆಗೆದಿದ್ದೇವೆ.

ಶ್ರೀ ಎಂ. ನಾಗಪ್ಪ.—ಆ ನೌಕರರು ಪೆನ್‌ಷನ್ ಸ್ಕೀಮಿಗೆ ಆಪ್ಟ್ ಮಾಡಿಕೊಂಡಿರುವ ಕಾರಣ ಅವರಿಗೆ ಅನಾನುಕೂಲಗಳಿರುವ ಕಾರಣ, ಪ್ರಾವಿಡೆಂಟ್ ಫಂಡ್ ರೂಪದಲ್ಲಿ ಏನು ಕೊಟ್ಟಿದ್ದಾರೆ ಅವರ ಕಾಂಟ್ರಿಬ್ಯೂಷನ್ ಮತ್ತು ತಾವು ಕೊಟ್ಟಿದ್ದ ಕಾಂಟ್ರಿಬ್ಯೂಷನ್ ಹಣ ಏನು ಬರತಕ್ಕುದಿದೆ ಅವೆರಡನ್ನೂ ಕೊಡಿಸಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬೋರ್ಡಿಗೆ ಇದರಬಗ್ಗೆ ವಿಚಾರ ಮಾಡಿರಿ ಎಂದು ಹೇಳುತ್ತೇನೆ.

Sanction of Tractors in Raichur District

217. Sri K. SANGANA GOWDA (Lingsugur).—

Will the Minister for Agriculture be pleased to state :—

(*a*) the number of tractors sanctioned in Raichur District during 1965-66, 1966-67 and 1967-1968 on hire purchase system ;

(*b*) the number of tractors supplied during the said period in Raichur District ;

(*c*) the number of applications pending sanction in Raichur District ;

(*d*) since how long they are pending ;

(*e*) the reasons for the delay (Talukwise information be given) ;

(*f*) whether the Government are aware of the difficulties experienced by the tractor owners in not getting the tyres for rear wheels in the market, if so, the steps taken by the Government in this regard ?

A.—Sri D. B. PAWAR (Deputy Minister for Major Irrigation and Electricity) [On behalf of SRI B. RACHAIAH (Minister for Agriculture)].—

(*a*)	1965–66	...	1
	1966–67	...	10
	1967–68	...	16
(*b*)	1965–66	...	Nil
	1966–67	...	5
	1967–68	...	8